ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಅರ್ಜೀದಾರನು ಈ ಕೋರ್ಟಿಗೆ ಖಾಯಿಸ್ ಮಾಡಿರುತ್ತಾನೆ.

ಸದರೀ ದರಖಾಸ್ತನ್ನು 1885ನೇ ಇಸವಿ ಡಿಕಂಬರ್ ತಿಂಗಳು 10ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅವಿಾನುದ್ದೀ ಸಾಬಿ ಆಸ್ತಿಗೆ ಹಕ್ಕುದಾರರಾದ ವಿಶೇಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ನವಂಬರ್ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟುವೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರೈಸ್,
ಸಬ್ ಜಡ್ಜ್.

ಸ್ಯ 1885ನೇ ಇಸವಿ ಅಕ್ಟೋಬರ್ ತಿಂಗಳ ಕಾಲಸ್ಥಿತಿ ರಿಪೋರ್ಟು.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ—ಈ ಮಾಹೆಯೊಳಗೆ ಇದರಡಿಕಂಡಂತೆ ಮಳೆ ಆಗಿಯಲ್ಪಟ್ಟಿತು.

		ಇಂ.	ಸೆಂ.			ಇಂ.	ಸೆಂ.
ಶಿವಮೊಗ್ಗಾ	..	6	98	ನಾಗರ	..	6	15
ಚನ್ನಗಿರಿ	..	6	54	ನಗರ	..	6	55
ಹೊನ್ನಾಳಿ	..	8	88	ತೀರ್ಥಹಳ್ಳಿ	..	7	34
ಶಿಕಾರಿಪುರ	..	6	70	ದಾವಣಗೆರೆ	..	3	50
ಸೊರಬ	..	4	65				

ಕೇರಾವಾದ ಧಾನ್ಯಗಳು—ಹುರಳಿ, ಕಡ್ಲೆ, ಜೋಳ, ಹತ್ತೀಬೀಜ, ಎಳ್ಳು, ಹರಳು, ಭತ್ತಾ, ರಾಗಿ, ನವಣೆ ಮತ್ತು ಗೋಧಿ.

ಫಸಲ್‌ಗಳ ಸ್ಥಿತಿ—ಈಚಿಗೆ ಆದ ವಿಶೇಷ ಮಳೆಯಿಂದ ಬೆಳೆಯಲ್ಲಿರುವ ಫಸಲ್‌ಗಳು ವಳ್ಳೆ ಸ್ಥಿತಿಯಲ್ಲಿ ಇವೆ.

ಕಟಾವಾದ ಫಸಲ್‌ಗಳು—ರಾಗಿ, ಜೋಳ, ಹುಚ್ಚೆಳ್ಳು, ನವಣೆ, ಸಾಸ್ವೆ, ಅಡಿಕೆ, ಹುಣಿಸೆ, ಎಳ್ಳು, ಮತ್ತು ಯಾಲಕ್ಕಿ.

ಜನಾರೋಗ್ಯ—ಡಿಸ್ಟ್ರಿಕ್ಟಾ ಮುಳೆ ಪ್ರಾಯಶಃ ಸಾಧಾರಣವಾಗಿ ಜನಾರೋಗ್ಯವು ಚೆಂದಾಗಿ ಇದೆ.

ಜಮೀನಾಗಳು—ಈ ಮಾಹೆಯಲ್ಲಿ ರೂ. 1087—10—0 ಕಂದಾಯವುಳ್ಳ ಜಮೀನಾಗಳು ಸಾಗುವಳಿಗೆ ತೆಗದುಕೊಳ್ಳಲ್ಪಟ್ಟವು, ಮತ್ತು ರೂ. 38—12—0 ಕಂದಾಯವುಳ್ಳ ಜಮೀನಾಗಳಿಗೆ ರಾಜೀನಾಮೆ ಕೊಡಲ್ಪಟ್ಟಿತು.

ದಾರಣೆವಾಸಿ—ಸ್ವಲ್ಪ ತಗ್ಗಿದೆ.

ಪಿ. ಪಂಚಕೆನಾಥರಾವ್,
ಫಾರ್ ಡೆ|| ಕಮ್ಮಿಷನರ್.

Mysore Gove[illegible]nt Pri[illegible] Bangalore.—1885.